**O.S.No.333/2019**
**P.W-1**

**ಸಾಕ್ಷಿಯನ್ನು ದಿನಾಂಕ:05.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಬಿ ಟಿ ಆರ್ ವಕೀಲರಿಂದ:**

ನಿಪಿ.8ರ ಆಸ್ತಿಯನ್ನು ನಾರಾಯಣಾಚಾರಿಯವರಿಂದ ಕೊಳ್ಳಲಾಗಿತ್ತು. ನಾರಾಯಣಾಚಾರಿಗೆ ಸದರಿ ಆಸ್ತಿ ವಿಭಾಗದಲ್ಲಿ ಬಂದಿತ್ತು. ಸದರಿ ವಿಭಾಗದ ದಾಖಲೆಯನ್ನು ನನ್ನ ತಂದೆ ನೋಡಿ ಆಸ್ತಿ ಬರೆಸಿಕೊಂಡಿದ್ದರು. ನಾರಾಯಣಾಚಾರಿಗೆ ಎರಡು ಆಸ್ತಿಗಳು ವಿಭಾಗದಲ್ಲಿ ಬಂದಿದ್ದವು. ನಾರಾಯಣಾಚಾರಿಗೆ ಖಾತೆಯಾದ ಬಗ್ಗೆ ಪಹಣಿ ಮತ್ತು ಎಂ ಆರ್ ದಾಖಲೆ ಹಾಜರುಪಡಿಸಿದ್ದೇನೆ.

2. ಸರ್ವೆ ನಂ.29 ಅಸ್ತಿತ್ವದಲ್ಲಿ ಇರದೇ ಅದು ದುರಸ್ತಿಯಾಗಿದೆ ಎಂದರೆ ಸಾಕ್ಷಿಯು ತಮ್ಮ ಹೆಸರಿಗೆ ಆಗಿದೆ ಎಂದು ನುಡಿಯುತ್ತಾರೆ. ನಮ್ಮ ಹೆಸರಿಗೆ 17 ಗುಂಟೆ ,15 ಗುಂಟೆ ,21 ಗುಂಟೆ ನಮ್ಮ ತಂದೆಯ ಹೆಸರಿಗೆ ದಾಖಲಾಗಿದೆ. ಕೇವಲ ನಮಗೆ 33 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ನಿಪಿ.8 ರ ಆಸ್ತಿ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಬರುತ್ತದೆ. ಭದ್ರಯ್ಯನಿಂದ ಕೊಂಡ ಆಸ್ತಿ ದಾವಾ ಆಸ್ತಿಯ ದಕ್ಷಿಣಕ್ಕೆ ಬರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿಯ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.8ರ ಕ್ರಯಪತ್ರದ ಎಂ ಆರ್ ಅನ್ನು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ರದ್ದು ಮಾಡಲಾಗಿದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ವಿಚಾರ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.8ರ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.